ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ.ಅ) ನಿಗಮ ಕಛೇರಿ, ನವನಗರ, ಹುಬ್ಬಳ್ಳಿ
ದೂರವಾಣಿ ಸಂಖ್ಯೆ: 0836-2302682
ಫ್ಯಾಕ್ಸ ಸಂಖ್ಯೆ: 0836-2324307

**HUBBALLI ELECTRICITY COMPANY LIMITED**
**(Wholly owned Govt of Karnataka undertaking)**
**General Manager(Admin & HRD)**
**Corporate Office, HESCOM, Hubballi**
Website: www.hescom.co.in

**(CIN): U31401KA2002SGC030437**

ಸಂ: ಹು/ಕೈ.ತ.ಕೇಂ./ಪ್ರ.ವ್ಯ(ಆ ಮತ್ತು ಮಾ.ಸಂ.ಅ)/ಕಾ.ನಿ.ಇ(ವಿ)/2020-21/690 ದಿನಾಂಕ: 31.01.2020

# ಪ್ರಕಟಣೆ

ವಿಷಯ: 2020-21 ನೇ ಸಾಲಿನಲ್ಲಿ ಇಲೆಕ್ಟ್ರೀಶಿಯನ್ ವೃತ್ತಿ ತರಬೇತಿಗಾಗಿ 246 ಶಿಶುಕ್ಷುಗಳನ್ನು ಆಯ್ಕೆ ಮಾಡುವ ಕುರಿತು.

*********

2020-21 ನೇ ವರ್ಷದ ಅವಧಿಗಾಗಿ ಇಲೆಕ್ಟ್ರೀಶಿಯನ್ ವೃತ್ತಿ ತರಬೇತಿಗಾಗಿ 246 ಶಿಶುಕ್ಷುಗಳನ್ನು ಆಯ್ಕೆ ಮಾಡಲು ಅರ್ಜಿಗಳನ್ನು ಕರೆಯಲಾಗಿದ್ದು, ಅರ್ಹ ಅಭ್ಯರ್ಥಿಗಳಿಗೆ ಬೇಕಾಗುವ ಅರ್ಹತೆಗಳ ವಿವರ ಹಾಗೂ ಶಿಶುಕ್ಷುಗಳು ಸಲ್ಲಿಸಬೇಕಾಗುವ ಅರ್ಜಿಯ ನಮೂನೆ ಹಾಗೂ ಸಂಬಂಧಿತ ಲಗತ್ತುಗಳು

ಹೆಸ್ಕಾಂನ ವೆಬ್ ಸೈಟ್ : www.hescom.co.in ನಲ್ಲಿ ಲಭ್ಯವಿರುತ್ತವೆ. ಭರ್ತಿ ಮಾಡಿದ ಅರ್ಜಿಗಳನ್ನು, ಲಗತ್ತುಗಳೊಂದಿಗೆ ಕಾರ್ಯನಿರ್ವಾಹಕ ಇಂಜಿನೀಯರರು(ವಿ), ಕೈಗಾರಿಕಾ ತರಬೇತಿ ಕೇಂದ್ರ (ಐ.ಟಿ.ಸಿ), ಹೆಸ್ಕಾಂ, ವಿದ್ಯುತ್ ನಗರ, ಕಾರವಾರ ರಸ್ತೆ, ಹುಬ್ಬಳ್ಳಿ-24, ಇವರಿಗೆ ದಿನಾಂಕ 18.02.2020 ರ ಸಂಜೆ 4.00 ಘಂಟೆಯ ಒಳಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಕಳುಹಿಸಬಹುದಾಗಿದೆ. ಮುಂದಿನ ವಿವರಗಳಿಗಾಗಿ ಕಾರ್ಯನಿರ್ವಾಹಕ ಅಭಿಯಂತರರು (ವಿ), ಕೈಗಾರಿಕಾ ತರಬೇತಿ ಕೇಂದ್ರ ಇವರನ್ನು ಸಂಪರ್ಕಿಸಿರಿ (0836-2956611).

ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ.ಅ)
ನಿಗಮ ಕಛೇರಿ, ನವನಗರ, ಹುಬ್ಬಳ್ಳಿ

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ.ಅ) ನಿಗಮ ಕಛೇರಿ, ನವನಗರ, ಹುಬ್ಬಳ್ಳಿ
ದೂರವಾಣಿ ಸಂಖ್ಯೆ: 0836-2302682
ಫ್ಯಾಕ್ಸ ಸಂಖ್ಯೆ: 0836-2324307

HUBBALLI ELECTRICITY COMPANY LIMITED
(Wholly owned Govt of Karnataka undertaking)
General Manager(Admin & HRD)
Corporate Office, HESCOM, Hubballi
Website: www.hescom.co.in

(CIN): U31401KA2002SGC030437

ಸಂ: ಹು/ಕೈ.ತ.ಕೇಂ./ಪ್ರ.ವ್ಯ(ಆ ಮತ್ತು ಮಾ.ಸಂ.ಅ)/ಕಾ.ನಿ.ಇ(ವಿ)/2020-21/690 ದಿನಾಂಕ: 31.01.2020

# 2020-21 ನೇ ಸಾಲಿನಲ್ಲಿ ಎಲೆಕ್ಟ್ರೀಶಿಯನ್ ವೃತ್ತಿ ತರಬೇತಿಗಾಗಿ ಅರ್ಜಿ ಕರೆಯಲಾದ ಅಭ್ಯರ್ಥಿಗಳ ಅರ್ಹತೆಗಳ ವಿವರ ಹಾಗೂ ಅರ್ಜಿ ನಮೂನೆ

ವಿಷಯ: 2020-21 ನೇ ಸಾಲಿನಲ್ಲಿ ಇಲೆಕ್ಟ್ರೀಶಿಯನ್ ವೃತ್ತಿ ತರಬೇತಿಗಾಗಿ 246 ಜನ ಶಿಶುಕ್ಷುಗಳ ಆಯ್ಕೆ ಕುರಿತು.

*********

ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಹುಬ್ಬಳ್ಳಿಯ ವಿದ್ಯುತ್ ನಗರದಲ್ಲಿರುವ ಕೈಗಾರಿಕಾ ತರಬೇತಿ ಕೇಂದ್ರದಿಂದ 2020-21 ನೇ ಸಾಲಿನ ಇಲೆಕ್ಟ್ರೀಶಿಯನ್ ವೃತ್ತಿಯಲ್ಲಿ ಶಿಶುಕ್ಷು ತರಬೇತಿ ಪಡೆಯಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಕರೆಯಲಾಗಿದೆ.

1. ಎನ್.ಸಿ.ವಿ.ಟಿ/ಎಸ್.ಸಿ.ವಿ.ಟಿ(NCVT/SCVT) ಶೈಕ್ಷಣಿಕ ಸಂಸ್ಥೆಗಳಿಂದ ಎರಡು ವರ್ಷದ ಐ.ಟಿ.ಐ (ಇಲೆಕ್ಟ್ರೀಶಿಯನ್) ಪ್ರಮಾಣ ಪತ್ರ ಹೊಂದಿರುವ ಅಭ್ಯರ್ಥಿಗಳಿಗೆ ಒಂದು ವರ್ಷದ ಶಿಶುಕ್ಷು ತರಬೇತಿಯನ್ನು ನೀಡಲಾಗುವುದು.
2. ಅಭ್ಯರ್ಥಿಯ ವಯಸ್ಸು 18.02.2020 ಕ್ಕೆ 25 ವರ್ಷಕ್ಕಿಂತ ಮೀರಿರಬಾರದು. ಪರಿಶಿಷ್ಟ ಜಾತಿ/ ಪಂಗಡದ ಅಭ್ಯರ್ಥಿಗಳ ವಯಸ್ಸು 18.02.2020 ಕ್ಕೆ 30 ವರ್ಷಕ್ಕಿಂತ ಮೀರಿರಬಾರದು.
3. ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ಕನ್ನಡ ಭಾಷೆಯನ್ನು ಒಂದು ವಿಷಯವಾಗಿ ತೆಗೆದುಕೊಂಡಿದ್ದು ಮತ್ತು ಕನ್ನಡದಲ್ಲಿ ಓದಲು ಹಾಗೂ ಬರೆಯಲು ತಿಳಿದಿರಬೇಕು.
4. ಇಲೆಕ್ಟ್ರೀಶಿಯನ್ ವೃತ್ತಿಯಲ್ಲಿ ವ್ಯಾಸಂಗ ಮಾಡಿ ಉತ್ತೀರ್ಣರಾಗಿರುವ ಪುರುಷ ಹಾಗೂ ಮಹಿಳಾ ಅಭ್ಯರ್ಥಿಗಳು ಅರ್ಜಿ ಸಲ್ಲಿಸಲು ಅರ್ಹರಾಗಿರುತ್ತಾರೆ.
5. ತರಬೇತಿ ಅವಧಿಯಲ್ಲಿ ಶಿಶುಕ್ಷು ವೇತನವನ್ನು ಪ್ರತಿ ತಿಂಗಳಿಗೆ ರೂ. 10,926/- ಕ್ಕೆ ನಿಗದಿಪಡಿಸಲಾಗಿದೆ.

6. ಪೂರ್ಣ ವಿವರವಿರುವ (ಬಯೋಡಾಟಾ) ಎ–4 ಸೈಜಿನ ಪೇಪರಿನಲ್ಲಿ ಸ್ವಯಂ ಲಿಖಿತ ಅಥವಾ ಬೆರಳಚ್ಚು ಮಾಡಿದ ಅರ್ಜಿಗಳನ್ನು ರೂ. 100/– ಮತ್ತು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳು ರೂ. 50/– ಬೆಲೆಯ ಮೊತ್ತದ ಇಂಡಿಯನ್ ಪೋಸ್ಟಲ್ ಆರ್ಡರ್‌ನ್ನು **"ಆರ್ಥಿಕ ಸಲಹೆಗಾರರು, ಹು.ವಿ.ಸ.ಕಂ.ನಿ, ಹುಬ್ಬಳ್ಳಿ "** ಇವರ ಹೆಸರಿನಲ್ಲಿ ಖರೀದಿಸಿ ಅರ್ಜಿಯೊಂದಿಗೆ ಲಗತ್ತಿಸಬೇಕು ಹಾಗೂ ಲಕೋಟೆಯ ಮೇಲೆ **"ಇಲೆಕ್ಟ್ರೀಶಿಯನ್ ವೃತ್ತಿಯ ಶಿಶುಕ್ಷು ತರಬೇತಿಗಾಗಿ ಅರ್ಜಿ"** ಎಂದು ನಮೂದಿಸಬೇಕು.

7. ಅರ್ಜಿಯೊಂದಿಗೆ ಈ ಕೆಳಗಿನ ದಾಖಲಾತಿಗಳನ್ನು ಲಗತ್ತಿಸಬೇಕು.

ಅ) ಇಬ್ಬರು ಗಣ್ಯ ವ್ಯಕ್ತಿಗಳಿಂದ/ ಗೆಜೆಟೆಡ್ ಅಧಿಕಾರಿಗಳಿಂದ ಆರು ತಿಂಗಳೊಳಗಿನ ನಡತೆ ಪ್ರಮಾಣ ಪತ್ರವನ್ನು ಪಡೆದುಕೊಂಡು ಧೃಡೀಕರಿಸಲ್ಪಟ್ಟ ಛಾಯಾ ಪ್ರತಿ (ಝೆರಾಕ್ಸ ).

ಆ). ಧೃಡೀಕರಿಸಲ್ಪಟ್ಟ ಜಾತಿ/ಹಿಂದುಳಿದ ವರ್ಗಗಳ ಪ್ರಮಾಣ ಪತ್ರದ ಛಾಯಾ ಪ್ರತಿ(ಝೆರಾಕ್ಸ).

ಇ) ಧೃಡೀಕರಿಸಲ್ಪಟ್ಟ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಮತ್ತು ವರ್ಗಾವಣೆ ಪತ್ರದ (ಟೀ.ಸಿ) ಛಾಯಾ ಪ್ರತಿ (ಝೆರಾಕ್ಸ).

ಈ) ಧೃಡೀಕರಿಸಲ್ಪಟ್ಟ ಇಲೆಕ್ಟ್ರೀಶಿಯನ್ ವೃತ್ತಿಯಲ್ಲಿ ಎರಡು ವರ್ಷದ ಕೋರ್ಸಿನ ಅಂಕಪಟ್ಟಿಯ ಛಾಯಾ ಪ್ರತಿ (ಝೆರಾಕ್ಸ).

ಉ) ಆರು ತಿಂಗಳೊಳಗೆ ಧೃಡೀಕರಿಸಲ್ಪಟ್ಟ ಸರಕಾರಿ ಆಸ್ಪತ್ರೆಯ ವೈದ್ಯಕೀಯ ಯೋಗ್ಯತಾ ಪ್ರಮಾಣ ಪತ್ರದ ಛಾಯಾ ಪ್ರತಿ (ಝೆರಾಕ್ಸ).

ಊ) ಇತ್ತೀಚಿಗಿನ ಪಾಸಪೋರ್ಟ ಸೈಜಿನ ಒಂದು ಭಾವ ಚಿತ್ರವನ್ನು ಅರ್ಜಿಗೆ ಲಗತ್ತಿಸಬೇಕು.

8. ಧೃಡೀಕರಿಸದೇ ಇರುವ ಪ್ರಮಾಣ ಪತ್ರಗಳನ್ನೊಳಗೊಂಡ ಹಾಗೂ ಪೂರ್ಣ ವಿವರವಿಲ್ಲದ ಅರ್ಜಿಗಳನ್ನು ನೇರವಾಗಿ ತಿರಸ್ಕರಿಸಲಾಗುವುದು.

9. ಅಭ್ಯರ್ಥಿಗಳು ಸ್ವ ವಿಳಾಸ ವಿರುವ **4"x9"** ಅಳತೆಯ 1 ಲಕೋಟೆಯನ್ನು ಅರ್ಜಿಯ ಜೊತೆಗೆ ಕಳುಹಿಸಬೇಕು.

10. ಜಂಟಿ ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ ಇಲಾಖೆಯವರು ಸೂಚಿಸಿದಂತೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವಾಗ ವಿವಿಧ ಪಂಗಡಕ್ಕೆ ಸೇರಿದ ಅಭ್ಯರ್ಥಿಗಳಿಗೆ ನಿಯಮಾನುಸಾರ ಸ್ಥಾನಗಳನ್ನು ಕಾಯ್ದಿರಿಸಲಾಗುವುದು. **ಭರ್ತಿ ಮಾಡಿದ ಅರ್ಜಿಗಳನ್ನು ಕಾರ್ಯನಿರ್ವಾಹಕ ಅಭಿಯಂತರರು(ವಿ), ಕೈಗಾರಿಕಾ ತರಬೇತಿ ಕೇಂದ್ರ, (ಆಯ್.ಟಿ.ಸಿ), ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ವಿದ್ಯುತ್‌ನಗರ, ಕಾರವಾರ ರಸ್ತೆ, ಹುಬ್ಬಳ್ಳಿ–580024** ರವರ ಕಛೇರಿಗೆ **18.02.2020** ರ ಸಂಜೆ 4 ಘಂಟೆಯೊಳಗಾಗಿ ಖುದ್ದಾಗಿ ಅಥವಾ ಅಂಚೆಯ ಮೂಲಕ ಕಳುಹಿಸಬೇಕು. ಯಾವುದೇ ಕಾರಣಕ್ಕೂ ಪೋಸ್ಟಲ್ ಆರ್ಡರ್‌ಗಳನ್ನು ವಾಪಸ್ ಮಾಡಲಾಗುವುದಿಲ್ಲ ಮತ್ತು ಶಿಫಾರಸು ತರುವ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಯಾವುದೇ ರೀತಿಯ ಪತ್ರ ವ್ಯವಹಾರಗಳಿಗೆ ಆಸ್ಪದವಿರುವುದಿಲ್ಲ.

ಪ್ರಧಾನ ವ್ಯವಸ್ಥಾಪಕರು (ಆ ಮತ್ತು ಮಾ.ಸಂ.ಅ)
ನಿಗಮ ಕಛೇರಿ, ನವನಗರ, ಹುಬ್ಬಳ್ಳಿ

8.1.20

# ಅರ್ಜಿ ನಮೂನೆ

## ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
## ಕೈಗಾರಿಕಾ ತರಬೇತಿ ಕೇಂದ್ರ ಹುಬ್ಬಳ್ಳಿಯಲ್ಲಿಯ ಶಿಶುಕ್ಷು ತರಬೇತಿಗಾಗಿ ಅರ್ಜಿ

ಭಾವಚಿತ್ರ

ಇಂಡಿಯನ್ ಪೋಸ್ಟಲ್ ಆರ್ಡರ್ ಸಂಖ್ಯೆ :
ದಿನಾಂಕ :
ರೂಪಾಯಿ :

1) ಅಭ್ಯರ್ಥಿಯ ಹೆಸರು :

2) ತಂದೆ, ತಾಯಿ/ಪೋಷಕರ ಹೆಸರು :

3) ಹುಟ್ಟಿದ ದಿನಾಂಕ :

4) ಪರಿಶಿಷ್ಠ ಜಾತಿ/ ಪರಿಶಿಷ್ಠ ಪಂಗಡಕ್ಕೆ ಸೇರಿದವರೇ, ಹೌದಾದರೆ ಪ್ರಮಾಣ ಪತ್ರ ಲಗತ್ತಿಸುವುದು. :

5) ಅಂಚೆ ವಿಳಾಸ ಹಾಗೂ ದೂರವಾಣಿ ಸಂಖ್ಯೆ :

6) ವಿದ್ಯಾರ್ಹತೆ: (ಐ.ಟಿ.ಐ. ನಲ್ಲಿ ಗಳಿಸಿದ) :
ಗರಿಷ್ಠ ಅಂಕಗಳು :
ಪಡೆದ ಅಂಕಗಳು :
ಶೇಕಡಾವಾರು ಅಂಕಗಳು :

7) ಇಬ್ಬರು ಗಣ್ಯ ವ್ಯಕ್ತಿ/ಗೆಜೆಟೆಡ್ ಅಧಿಕಾರಿಗಳಿಂದ ಪಡೆದ ನಡತೆ ಪ್ರಮಾಣ ಪತ್ರಗಳನ್ನು ಲಗತ್ತಿಸಲಾಗಿದೆಯೇ. :

8) ಧೃಡೀಕರಿಸಲ್ಪಟ್ಟ ಎಸ್.ಎಸ್.ಎಲ್.ಸಿ. ಅಂಕಪಟ್ಟಿ ಮತ್ತು ವರ್ಗಾವಣೆ ಪತ್ರದ (ಟಿ.ಸಿ.) ಛಾಯಾಪ್ರತಿಯನ್ನು(ಝುರಾಕ್ಸ) ಲಗತ್ತಿಸಲಾಗಿದೆಯೇ. :

9) ಆರು ತಿಂಗಳೊಳಗೆ ಧೃಡೀಕರಿಸಲ್ಪಟ್ಟ ಸರಕಾರಿ ಆಸ್ಪತ್ರೆಯ ವೈದ್ಯಕೀಯ ಯೋಗ್ಯತಾ ಪ್ರಮಾಣ ಪತ್ರದ ಛಾಯಾಪ್ರತಿಯನು (ಝುರಾಕ್ಸ) ಲಗತ್ತಿಸಲಾಗಿದೆಯೇ. :

10) ಸ್ವ ವಿಳಾಸ ವಿರುವ 4"X9" ಅಳತೆಯ 1 ಲಕೋಟೆಯನ್ನು :
ಅರ್ಜಿಯ ಜೊತೆಗೆ ಲಗತ್ತಿಸಲಾಗಿದೆಯೇ.

ಈ ಮೇಲೆ ತಿಳಿಸಿದ ವಿವರಗಳು ಸತ್ಯವಿದೆ ಎಂದು ಪ್ರಮಾಣ ಮಾಡುತ್ತೇನೆ. ಒಂದು ವೇಳೆ ಅಸತ್ಯವೆಂದು ಕಂಡು ಬಂದಲ್ಲಿ ನನ್ನ ಮೇಲೆ ಕಾನೂನು ಕ್ರಮ ಜರುಗಿಸಬಹುದೆಂದು ಒಪ್ಪುತ್ತೇನೆ.

ಅರ್ಜಿದಾರರ ಸಹಿ,

ಸ್ಥಳ:

ದಿನಾಂಕ: